# ಹೂ ಮುಡಿ ಮನಸೇ ಬೆಟ್ಟವನೂ ಹೊರು

ಓಹ್ ಇಲ್ಲಿ ಹೀಗೇನೆ
ಎಲ್ಲ ಭೂಮಿಯ ಹಾಗೆ

ಕತ್ತಲ ಕಾನನ ಮುಳ್ಳು ಕಂಟಿ
ವಿಷಜಂತುಗಳ ಸಭೆ ಹಲ್ಲಿನ ಮೊನೆ
ಸುರಿವ ಹಗೆಯ ಸೋನೆ
ಕ್ಯಾಕರಿಸಿದ ಉಗುಳು ಹರವಿದ ಮಲ
ಮೂತ್ರದ ಕಮಟು ಹೆಜ್ಜೆಯೊರಟು
ಮುತ್ತುವ ಹಾದರ ತೀರದ ಲಂಪಟ
ತಣಿಯದ ರಕ್ಕಸ ಕಾಮ
ಮಣಿಯದ ಕಡು ಸುರಸುರತ
ಬೇಕೆಂಬುದರ ಬೆನ್ನೇರಿದ
ವ್ಯಾಕುಲದ ದಾಹಿ ವ್ಯಾಧಿ ಕುಲ

ಓಹ್ ಇಲ್ಲಿ ಹೀಗೇನೆ
ಎಲ್ಲ ಭೂಮಿಯ ಹಾಗೆ

ಪಾತ್ರ ಬದಲಿಸುವ ನದಿ ಕಾಣದ ತುದಿ
ತೀರ್ಥ ವೈತರಣಿ ವರ ಸರೊವರ
ಸೌಗಂಧಿಕಗಳ ಗಿರಿ ಕಂಪಿನ ಸಿರಿ
ಬತ್ತದ ಗದ್ದೆ ಇಂಗದ ತೊರೆ
ಗರಿಗೆದರುವ ಹಗಲು ಸಪ್ನದಿರುಳು
ಮೇಘಮಾಲೆಯ ಬಾನಗೊರಳು
ನಿಧಿಚೆಮ್ಮುವ ಮಣ್ಣ ಮಡಿಲು
ಹಕ್ಕಿಗಳು ತೊಟ್ಟ ಬಣ್ಣಬಟ್ಟೆ
ಹೂವು ಮಿಂದ  ಘಮಲ ಕುಂಡ
ಸ್ವರ್ಗವ ಬರೆವ ಹಸಿರ ಭಿತ್ತಿ

ಓಹ್ ಇಲ್ಲಿ ಹೀಗೇನೆ
ಎಲ್ಲ ಭೂಮಿಯ ಹಾಗೆ

ಬೆಂಕಿಯ ಹಡಗು ಮಳೆಯ ಬೆಡಗು
ಹಸಿವ ಜೀವ ಬೆಸೆವ ಭಾವ
ಮುಳ್ಳ ಸಂಕಟ ಹೂವಿನಪ್ಪುಗೆ
ಕಹಿಯೊಗರು ಹುಳಿಯುಪ್ಪು
ಮಗುವಿನ ನಗೆ ಕಾಲನ ಹಗೆ
ಕರುಳ ಮಾರ್ದವ ಕೂರಲುಗ ಸಂಗ
ಹುಲಿಯ ಪಂಜು ನವಿಲಗರಿ
ಬೊಗಸೆ ಬೆಚ್ಚ ಪ್ರೀತಿ ಸರ್ಪದುಸಿರು
ತುಳಸಿವೃಂದಾವನ ಸಮಾಧಿಯ ಅಸ್ತಿ
ಊಳಿಡುವ ಬರಡು ಬೆಳಕ ಸೊಡರು

ಓಹ್ ಇಲ್ಲಿ ಹೀಗೇನೆ
ಭೂಮಿಯ ಹಾಗೆ...

● ವಾಸುದೇವ ನಾಡಿಗ್



ನಾಗೇಶ ಹೆಗಡೆ